**ಹುಕ್ಕೇರಿ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಯೋಜನೆ**

955 - ಶ್ರೀ ಉಮೇಶ್ ವಿ. ಕತ್ತಿ (ಹುಕ್ಕೇರಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಪಾಶ್ಚಾಪೂರ ಹಾಗೂ ಸುತ್ತಲಿನ ಹನ್ನೊಂದು ಗ್ರಾಮಗಳಿಗೆ ಕುಡಿಯುವ ನೀರಿನ ಯೋಜನೆ ಪ್ರಾರಂಭಿಸಲಾಗಿದ್ದು ಆದು ಪೂರ್ತಿ ಹಾಳಾಗಿರುವ ವಿಷಯವು ಸರ್ಕಾರದವರ ಗಮನಕ್ಕೆ ಬಂದಿದೆಯೆ?*

ಆ) *ಬಂದಿದ್ದಲ್ಲಿ, ಆದನ್ನು ಸುಸಜ್ಜಿತಗೊಳಿಸಲು ಕೈಕೊಂಡ ಕ್ರಮಗಳೇನು?*

ಇ) *ಯಾವಾಗ ಪೂರ್ತಿಯಾಗಿ ಸುಸಜ್ಜಿತಗೊಳಿಸಲಾಗುವುದು?*

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಇಲಾಖೆ ಸಚಿವರು) :

ಅ) ಈಗ ಯಾವ ತೊಂದರೆಯೂ ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

**ಹುಕ್ಕೇರಿ ತಾಲ್ಲೂಕಿನ ಎನ್.ಆರ್. ಡಬ್ಲ್ಯೂ. ಎಸ್. ಸ್ಕೀಮ್‌ಗಳಿಗೆ ಮಂಜೂರಾದ ಹಣ**

956 - ಶ್ರೀ ಉಮೇಶ್ ವಿ.ಕತ್ತಿ (ಹುಕ್ಕೇರಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಕ್ಷೇತ್ರದಲ್ಲಿ ಈ ವರ್ಷ ಮಂಜೂರಾದ ಎನ್.ಆರ್.ಡಬ್ಲ್ಯೂ.ಎಸ್. ಸ್ಕೀಮ್‌ಗಳೆಷ್ಟು?*

ಆ) *ಸದರಿ ಸ್ಕೀಮ್‌ಗಳ ಬಗ್ಗೆ ಈ ವರ್ಷ ಖರ್ಚು ಮಾಡಿದ ಹಣವೆಷ್ಟು?*

ಇ) *ಯಾವ ಯಾವ ಸ್ಕೀಮ್‌ಗಳು ಯಾವ ಯಾವ ಹಂತದಲ್ಲಿದೆ?*

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಸಚಿವರು) :

ಅ) 23.

ಆ) ರೂ. 2.94 ಲಕ್ಷಗಳು.

ಇ) ಯೋಜನೆಗಳ ಹಂತವನ್ನು ತಿಳಿಸುವ ಪಟ್ಟಿಯನ್ನು ಲಗತ್ತಿಸಲಾಗಿದೆ.